5	ಶಿವಮೊಗ್ಗ	7.60	10.97	5.47	1	26	57	84
6	ಬಳ್ಳಾರಿ	9.72	12.10	8.84	-	25	59	84
7	ಬೀದರ್	13.72	8.50	4.52	1	16	77	94
8	ರಾಯಚೂರು	13.03	21.29	7.87	1	25	82	108
9	ಬೆಳಗಾಂ	24.59	16.02	17.61	1	24	77	102
10	ಗುಲ್ಬರ್ಗಾ	8.91	9.94	6.88	2	26	72	100
11	ಹಾಸನ	9.22	10.29	4.59	-	-	96	96
12	ತುಮಕೂರು	8.63	12.14	4.94	-	-	97	97
	ಒಟ್ಟು:	131.50	132.15	83.86	10	237	857	1104

ಇ) ಕೊಪ್ಪಳ ಜಿಲ್ಲೆ (ರಾಯಚೂರು ಯೋಜನಾ ಜಿಲ್ಲೆ), ಕುಷ್ಟಗಿ ತಾಲ್ಲೂಕಿನ ಹನುಮನಾಳ, ನಿಲಗೋಳ, ತುಗ್ಗಲದೋಣಿ, ಹುಲಿಗೆರಾ ಹಾಗೂ ಚಳ್ಳಗೆರಾ ಗ್ರಾಮಗಳಲ್ಲಿ ಪರಿಸರ ನೈರ್ಮಲ್ಯ (ಚರಂಡಿ, ಇತ್ಯಾದಿ) ಕಾಮಗಾರಿಗಳನ್ನು ಕಳಪೆ ಗುಣಮಟ್ಟದಲ್ಲಿ ಅನುಷ್ಠಾನಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಕಾಮಗಾರಿಗಳ ಪರಿವೀಕ್ಷಣೆ ಮತ್ತು ಪ್ರಾರಂಭಿಕ ತನಿಖೆಯಲ್ಲಿ ಕಳಪೆ ಕಾಮಗಾರಿ ಹಾಗೂ ಕೆಲಸ ಮಾಡಿರುವುದಕ್ಕಿಂತ ಹೆಚ್ಚಿನ ಅಳತೆ ಮಾಡಿರುವುದು ಕಂಡು ಬಂದಿರುತ್ತದೆ. ತನಿಖೆಯ ಪ್ರಕಾರ ರೂ.39.75 ಲಕ್ಷ (5 ಗ್ರಾಮಗಳಿಗೆ) ಹೆಚ್ಚುವರಿ ಹಣ ಸಂದಾಯವಾಗಿರುವುದಾಗಿ ಅಂದಾಜಿಸಲಾಗಿದೆ.

ಈ ಸಂಬಂಧದಲ್ಲಿ ಓರ್ವ ಸಹಾಯಕ ಕಾರ್ಯಪಾಲಕ ಅಭಿಯಂತರರು (ಪ್ರಭಾರ ಕಾರ್ಯಪಾಲಕ ಅಭಿಯಂತರರು) ಹಾಗೂ ಓರ್ವ ಸಹಾಯಕ ಅಭಿಯಂತರರನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ, ಅಮಾನತ್ತಿನಲ್ಲಿ ಇಡಲಾಗಿದೆ.

ರಾಜ್ಯದ ಉಪ ಖಜಾನೆಗಳಲ್ಲಿ ನಡೆದಿರುವ ಅವ್ಯವಹಾರ.

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ-ಗ್ರಾಮೀಣ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಉಪ ಖಜಾನೆಗಳಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಯಾವ ರೀತಿ ಅವ್ಯವಹಾರ ನಡೆದಿದೆ? (ವಿವರ ನೀಡುವುದು)

ಆ) ಈ ವ್ಯವಹಾರದಲ್ಲಿ ಎಷ್ಟು ಸರ್ಕಾರಿ ಹಣ ದುರುಪಯೋಗವಾಗಿದೆ?

ಇ) ಈ ಉಪ ಖಜಾನೆಗಳಲ್ಲಿ ನಡೆದಿರುವ ಅವ್ಯವಹಾರಕ್ಕೆ ಮನುಷ್ಯ ಸಹಜ ದೋಷಪ ಕಾರಣವೆಂಬುವುದು ನಿಜವೇ?

ಈ) ಈ ವ್ಯವಹಾರದಲ್ಲಿ ಎಷ್ಟು ಸಿಬ್ಬಂದಿ ಭಾಗಿಗಳಾಗಿದ್ದಾರೆ? ಅವರುಗಳ ವಿವರ ನೀಡುವುದು?

ಉ) ರಾಜ್ಯದಲ್ಲಿ ಎಷ್ಟು ಉಪ ಖಜಾನೆಗಳಿವೆ? (ವಿವರ ನೀಡುವುದು)

ಊ) ಈ ಎಲ್ಲಾ ಉಪ ಖಜಾನೆಗಳಲ್ಲಿ ಕಂಪ್ಯೂಟರ್‌ಗಳನ್ನು ಬಳಸಿದರೆ ಸಾರ್ವಜನಿಕರಿಗೆ ಉತ್ತಮ ಸೌಲಭ್ಯಗಳನ್ನು ನೀಡಬಹುದಲ್ಲವೇ?

ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿಗಳು):

ಅ) ಹೌದು. ಎಂಟು ಪ್ರಕರಣಗಳಲ್ಲಿ ಕರ್ತವ್ಯದಲ್ಲಿ ಪ್ರಕ್ರಿಯಾ ಲೋಪದೋಷಗಳು ಹಾಗೂ 5 ಪ್ರಕರಣಗಳಲ್ಲಿ ಹಣ ದುರುಪಯೋಗವಾಗಿರುವುದು.

ಆ) ಸುಮಾರು ರೂ.6,32,10,550-00

ಇ) ಈ ಪ್ರಕರಣಗಳ ಕುರಿತು ನಡೆಯುತ್ತಿರುವ ತನಿಖೆಯು ವಿವಿಧ ಹಂತಗಳಲ್ಲಿರುವುದರಿಂದ ಈ ಅವ್ಯವಹಾರಗಳಿಗೆ ಮನುಷ್ಯ ಸಹಜ ದೋಷವೇ ಕಾರಣವೆಂಬುದನ್ನು ಈಗಲೇ ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ.

ಈ) 28

ಸಹಾಯಕ ಖಜಾನಾಧಿಕಾರಿಗಳು	-	7
ಮುಖ್ಯ ಲೆಕ್ಕಾಧಿಕಾರಿಗಳು	-	10
ಪ್ರಥಮ ದರ್ಜೆ ಸಹಾಯಕರು	-	7

ದ್ವಿತೀಯ ಚರ್ಚೆ ಸಹಾಯಕರು - 4

ಉ) 184

(ಅ) ತಾಲ್ಲೂಕು ಉಪ ಖಜಾನೆಗಳು

ಬ್ಯಾಂಕಿಂಗ್ ಉಪ ಖಜಾನೆಗಳು	- 154
ಬ್ಯಾಂಕಿಂಗ್ ಉಪ ಖಜಾನೆಗಳು (ಕರೆನ್ಸಿ ಚೆಸ್ಟ್‌ನೊಂದಿಗೆ)	- 03
ಬ್ಯಾಂಕೇತರ ಉಪ ಖಜಾನೆಗಳು	- 11
ಒಟ್ಟು:	168

ಆ) ಹೋಬಳಿ ಕೇಂದ್ರದ ಉಪ ಖಜಾನೆಗಳು

ಪೂರ್ಣ ಪ್ರಮಾಣದ ಬ್ಯಾಂಕಿಂಗ್ ಉಪ ಖಜಾನೆಗಳು	- 04
ಏಕ ಸದಸ್ಯ ಬ್ಯಾಂಕಿಂಗ್ ಉಪ ಖಜಾನೆಗಳು	- 12
ಒಟ್ಟು:	16

ಊ) ಹೌದು.

ಬಂಡವಾಳ ಹೂಡಿಕೆ ಯೋಜನೆಯಡಿ ಉದ್ಯಮ ಪ್ರಾರಂಭಕ್ಕೆ ಅನುಮತಿ.

3036(3458)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ಕಳೆದ ವರ್ಷ ಏಪ್ರಿ ಬಂಡವಾಳ ಹೂಡಿಕೆ ದಿನ ಆಚರಣೆಯ ಸಂದರ್ಭದಲ್ಲಿ ಹೊಸ ಉದ್ಯಮಗಳನ್ನು ಪ್ರಾರಂಭಿಸಲು ಬಂದ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಹೊಸ ಉದ್ಯಮಗಳನ್ನು ಪ್ರಾರಂಭಿಸಲು ಏಕ ಗವಾಕ್ಷಿ ಯೋಜನೆಯಡಿ ಎಷ್ಟು ಅರ್ಜಿಗಳನ್ನು ಪುರಸ್ಕರಿಸಲಾಯಿತು?